ಓಂ ಹ್ರೀಂ ಶ್ರೀಂ

# ಶ್ರೀವಾಸವಿ ಕನ್ಯಕಾ ದೇವಿ ಪುರಾಣ

## ಚತುರ್ದಶಾಧ್ಯಾಯ

### ಮಲ್ಹರನ ತ್ಯಾಗ: ಅವನ ವಂಶೀಯರು ಮೈಲಾರರಾಗುವುದು:

ಸಾಲಂಕಾಯನ ಮಹರ್ಷಿ ಹೀಗೆ ಹೇಳತೊಡಗಿದರು. 'ಎಲೈ ಮಣಿಗುಪ್ತಾದಿಗಳೇ! ಮರುದಿನದ ಉದಯಕಾಲದಲ್ಲಿ ಸಮಸ್ತ ಆರ್ಯವೈಶ್ಯರು ಪ್ರನಃ ಶ್ರೀನಗರೇಶ್ವರಾಲಯ ಮಂಟಪದಲ್ಲಿ ಸಮಾವಿಷ್ಟರಾದರು ಸ್ವಲ್ಪ ತಡವಾಗಿ ಮಲ್ಹರನು ಆ ಸಭಾಪ್ರದೇಶಕ್ಕೆ ಆಹಮಿಸಿದನು. ಅವನು ಭಾಸ್ಕರಾಚಾರ್ಯರೊಡನೆ, 'ಆಚಾರ್ಯವರ್ಯಾ! ನಿಮ್ಮ ಆಜ್ಞೆಯ ಮೇರೆಗೆ **103** ಅಗ್ನಿಕುಂಡಗಳನ್ನು ನಿರ್ಮಿಸಿದೆವು. ಗುರುದೇವಾ! ಎಲ್ಲರ ಅಗ್ನಿಪ್ರವೇಶಕ್ಕೆ ಕುಂಡಗಳು ನಿರ್ಣಯಿಸಲ್ಪಟ್ಟವು. ಆದರೆ ನನಗೆ ಯಾವ ಕುಂಡವೋ ತಾವು ತಿಳಿಸಲಿಲ್ಲ. ದಯೆಮಾಡಿ ನನಗೂ ಕೂಡ ಅಗ್ರಿಪ್ರವೇಶಕ್ಕೆ ಅನುಮತಿಯನ್ನು ನೀಡಿ. ನಾನೂ ಕೂಡ ನಮ್ಮ ಒಡೆಯರಾದ ಆರ್ಯವೈಶ್ಯ ಮುಖ್ಯರೊಡನೆ ಅಗ್ನಿಯನ್ನು ಪ್ರವೇಶಿಸಿ ಮುಕ್ತಿಯನ್ನು ಹೊಂದುವೆನು. ಆದ್ದರಿಂದ ನನಗೆ ಶ್ರೇಷ್ಠವಾದ ಮೋಕ್ಷಸ್ಥಾನವೆಲ್ಲಿರುವುದೋ ನಿರ್ಣಯಿಸಿ ಹೇಳಿರಿ; ಎಂದು ಪರಿ ಪರಿ ವಿಧಗಳಲ್ಲಿ ಪ್ರರ್ಥಿಸಿದನು. ಭಕ್ತಿವಿಧೇಯನಾದ ಆ ಮಲ್ಹರನ ತ್ಯಾಗಬುದ್ಧಿಯನ್ನು ಕಂಡು ಭಾಸ್ಕರಾಚಾರ್ಯರು ಅವಿದ್ಯಾವಂತರೂ, ಶೂದ್ರರೂ ಆದ ಅವರಲ್ಲಿಯೂ ಕೂಡ ಧರ್ಮರಕ್ಷಣೆಗಾಗಿ ಪ್ರಾಣಗಳನ್ನು ಬಲಿದಾನಮಾಡಬಲ್ಲ ಅಮೋಘ ತ್ಯಾಗಶಕ್ತಿಯನ್ನುಂಟುಮಾಡಿದ ವಾಸವಿಕನ್ಯಕೆಯ **ಅಹಿಂಸಾಯುತ ವಿನೂತನ ಹೋರಾಟ ವಿಧಾನ**ವನ್ನು ವಿಶೇಷವಾಗಿ ಪ್ರಶಂಸಿಸಿ ಮಲ್ಹರನೊಡನೆ ಉತ್ತರ ದಿಕ್ಕಿನಲ್ಲಿ ಹೊರಗಡೆ ಉರಿಯುತ್ತಿರುವ ಅಗ್ನಿಕುಂಡವು ನಿನಗೆ ಮೋಕ್ಷಪ್ರದವು' ಎಂದು ಹೇಳಲು, ವಾಸವಿದೇವಿಯು ಆ ಮಲ್ಹರನನ್ನು ಕಂಡು, 'ಓ ತ್ಯಾಗಮೂರ್ತಿ! ಇದ್ದು ಮುಂದೆ ನಿನ್ನ ವಂಶಜರೆಲ್ಲ ಮಲ್ಹಾರರೆಂದು ಕರೆಯಲ್ಪಡುವರು. ಕಾಲಕ್ರಮದಲ್ಲಿ ಅವರೇ ಮೈಲಾರರೆಂದು ಪ್ರಸಿದ್ಧರಾಗುವರು. ಅವರು ವಂಶಪರಂಪರೆಯಾಗಿ ವೈಶ್ಯರಿಗೆ ಸೇವೆ ಸಲ್ಲಿಸುತ್ತಾ, ಅವರುಂದ

ಪೋಷಿಸಲ್ಪಡುತ್ತಾ, ಸುಳಮಯ ಜೀವನವನ್ನು ನಡೆಸಬಲ್ಲರು; ಎಂದು ಪ್ರಕಟಿಸಿದಳು. ಅದನ್ನು ಕೇಳಿ ಅಲ್ಲಿದ್ದವರೆಲ್ಲಾ ವಾಸವಿಕನ್ಯಕಾ ನಾಮದೊಡನೆಯೂ ಮಲ್ಲಾರನ ನಾಮದೊಡನೆಯೂ ದಿಕ್ಕುಗಳು ಪ್ರತಿಧ್ವನಿಸುವಂತೆ ಜಯಘೋಷ ಮಾಡಿದರು.

## ವಾಸವಿ ಬಾಲೆಯು ಕನ್ಯಕಾ ವ್ರತವನ್ನು ಆಚರಿಸುವುದು

ಆಗ ವಾಸವಿ ಬಾಲೆಯು ಗುರುಗಳಿಗೂ ಸಭೆಗೂ ನಮಸ್ಕರಿಸಿ, 'ಸಭಾಸದರೇ! ಇಂದಿನಿಂದ ನಾನು ಕನ್ಯಕಾವ್ರತದೀಕ್ಷೆಯನ್ನು ಸ್ವೀಕರಿಸುತ್ತಿರುವೆನು. ಯೋಗಮಾಯಾ ಸ್ವರೂಪಿಣಿಯಾದ ವಿಂಧ್ಯವಾಸಿನಿ ದೇವ್ಯಾಲಯದಲ್ಲಿ ನನ್ನ ವ್ರತಾಚರಣೆಗೆ ಎಲ್ಲ ರೀತಿ ಯಲ್ಲೂ ಅಣಿಮಾಡಿಕೊಡಿರಿ. ನನಗೆ ಯಾವ ರೀತಿಯ ಕಾವಲನ್ನೂ ಇಡಬೇಡಿ; ಎಂದು ಹೇಳಿದಳು. ಕೂಡಲೇ ಕುಸುಮಶ್ರೇಷ್ಠಿಯು ಗುರುವಿನ ಆಣತಿಯಂತೆ ವ್ರತಕ್ಕೆ ಬೇಕಾದ ಏರ್ಪಾಟುಗಳನ್ನು ಮಾಡಲು ಮಂತ್ರಿಗಳಿಗೆ ಆದೇಶಿದನು. ನಂತರ ವಿಂಧ್ಯವಾಸಿನೀ ದೇವಿ ಆಲಯಪ್ರಾಂಗಣವು ಮುತ್ತಿನ ತೋರಣಗಳಿಂದಲೂ, ಸಮಸ್ತ ಮಂಗಳ ವಸ್ತುಗಳಿಂದಲೂ ಅತಿಲೋಕ ಸುಂದರವಾಗಿ ಅಲಂಕರಿಸಲ್ಪಟ್ಟಿತು. ವೈಶ್ಯ ರಾಜಭಟರು ಈ ವ್ರತವಾರ್ತೆಯನ್ನು ನಗರದಲ್ಲೆಲ್ಲಾ ತಿಳಿಸಿದರು. ವೈಶ್ಯರೆಲ್ಲರು ತಮ್ಮ ಗೃಹಗಳಿಗೆ ಹೋಗಿ ಮಂಗಳ ಸ್ನಾನವಾಚರಿಸಿ ನೂತನ ವಸ್ತ್ರಾಭರಣಗಳನ್ನು ಧರಿಸಿ ಆಶ್ರಿತರಿಗೆ ದೀನರಿಗೆ ಧನ ಕನಕ ವಸ್ತುವಾಹನಗಳನ್ನಿತ್ತು ವಿಂಧ್ಯವಾಸಿನಿದೇವಿ ಆಲಯಕ್ಕೆ ಆಗಮಿಸಿದರು.

ಅನಂತರ ವಾಸವಿ ಕನ್ಯಕೆಯನ್ನು ಅಲಂಕರಿಸುವುದಕ್ಕಾಗಿ ಕುಸುಮಾಂಬಾದಿ ವೈಶ್ಯವನಿತಾಮಣಿಯರು ಆನಂದೋತ್ಸಾಹಗಳಿಂದ ಅಲ್ಲಿಗೆ ಬಂದು ಸೇರಿದರು. ಒಂಭತ್ತು ಮಂದಿ ಕನ್ಯೆಯರು, 'ಝುಣಝುಣ ಎಂದು ಧ್ವನಿ ಮಾಡುವ ಕಂಕಣ ಕಂಠಹಾರಗಳು ಅತ್ತಿತ್ತ ಅಲುಗುತ್ತಿರಲು, ಕನ್ನಡಿಯಂಥ ಕಪೋಲಗಳಿಂದ ಸ್ವೇದ ಬಿಂದುಗಳು ಜಾರುತ್ತಿರುವ, ವಾಸವಿಕನ್ಯಕೆಗೆ ಅಭ್ಯಂಜನ ಸ್ನಾನ ಮಾಡಿಸಿದರು. ಮನೋಹರವಾದ ಸುವರ್ಣ ಪೀತಾಂಬರವನ್ನು ಉಡಿಸಿದರು. ಓರ್ವ ಮಹಿಳೆ ವಾಸವಿಕನ್ಯಕೆಯ ಮುಖಮಂಡಲದ ಮೇಲೆ ಕಸ್ತೂರೀತಿಲಕವನ್ನು ತಿದ್ದಲು, ಮತ್ತೋರ್ವ ವೈಶ್ಯಾಂಗನೆಯು ಮಣಿಮಯವಾದ

ಕರ್ಣಾಭರಣಗಳಿಂದ, ಅಮೂಲ್ಯ ಮುತ್ತಿನ ಹಾರಗಳಿಂದ, ರತ್ನಖಚಿತವಾದ ಹಸ್ತ ಭೂಷಣಗಳಿಂದ. ಅಮೂಲ್ಯ ಮುತ್ತಿನ್ನೋರ್ವ ವನಿತೆಯು ಚೆಲುವನ್ನು ಬೀರುವ ಕಾಲ್ಗೆಜ್ಜೆಗಳನ್ನು, ನವರತ್ನಖಚಿತವಾದ ವಡ್ಯಾಣವನ್ನು ಸುಂದರಾತಿಸುಂದರ ವಾದ ಮಂಜೀರಗಳನ್ನು ವಾಸವಿಕನ್ಯಕೆಗೆ ತೊಡಿಸಿದರು'. ಹೀಗೆ ಕನ್ಯಕೆಯನ್ನು ಅಲಂಕರಿಸಿ ಊಹಾತೀತ ಸೌಂದರ್ಯರಾಶಿಯಾದ ಆ ಮುಗ್ಧಪ್ರವೇಶ ವಿಷಯವನ್ನು ನೆನೆನೆನೆದು 'ಹಾ! ಎಷ್ಟು ಕಷ್ಟಕರ! ಎಷ್ಟು ಕಷ್ಟಕರ! ಎಂದು ಬಿಕ್ಕಿಬಿಕ್ಕಿ ಅಳತೊಡಗಿದರು. ಅಜ್ಞಾನದಿಂದ ಉಂಟಾದ ಅವರ ದುಃಖಾತಿಶಯವನ್ನು ಗಮನಿಸಿದ ಕನ್ಯಕೆಯು ದೇವತೆಗಳಿಗೂ, ಮುನಿಗಳಿಗೂ ಕೂಡ ದುರ್ಲಭ ದರ್ಶನೀಯವಾದ ತನ್ನ ದಿವ್ಯರೂಪವನ್ನು ಅವರಿಗೆ ಪ್ರದರ್ಶಿಸಿದಳು. ಲೀಲಾ ಶುಕ ಪದ್ಮಗಳನ್ನು ವರದಾಭಾಯ ಮುದ್ರೆಗಳನ್ನೂ ಧರಿಸಿ ಚತುರ್ಭುಜೆಯಾಗಿ ಸಮಸ್ತ ದಿವ್ಯಾಭರಣಗಳಿಂದ ಶೋಭಿಸುತ್ತ, ರಾಶಿರೂಪ ಸೌಂದರ್ಯವೇನೋ ಎನ್ನುವಂತೆ ಬಾಲ ಸ್ತ್ರೀಯರೆಲ್ಲರೂ ಆನಂದ ಪರವಶರಾದರು. ಪ್ರೇಮಪೂರ್ಣ ನೇತ್ರಗಳಿಂದ ಅವಳನ್ನು ದರ್ಶಿಸಿದರು. ಅನಂತರ ವಾಸವಿಯು ತನ್ನ ದಿವ್ಯರೂಪದಲ್ಲಿ ಧರಿಸಿದ್ಧ ನಾಸಿಕಾಭರಣವನ್ನು ಮಾತ್ರ ಧರಿಸಿರುತ್ತ ಮಿಕ್ಕ ಅದ್ಭುತ ಅಲೌಕಿಕ ರೂಪವನ್ನು ಅಂತರ್ದಾನಗೊಳಿಸಿದಳು. ಅಲ್ಲಿರುವವರೆಲ್ಲ ಆ ವಿಚತ್ರಲೀಲೆಯನ್ನು ಕಂಡು ವಿಸ್ಮಯಗೊಂಡರು. ಅವರಲ್ಲಿ ಭಕ್ತಿ ಪ್ರಪತ್ತಿಗಳು ನೂರ್ಮಡಿಗೊಂಡವು.

ಅನಂತರ ವಾಸವಿ ಕನ್ಯಕೆಯನ್ನು ಒಂದು ಉನ್ನತಾಸನದಲ್ಲಿ ಕುಳ್ಳಿರಿಸಿದರು. ಗುರುಭಾಸ್ಕರಾಚಾರ್ಯರು ಆ ವನಿತಾಮಣಿಗಳಿಂದ ವಾಸವಿ ಕನ್ಯಕೆಗೆ ಷೋಡಶೋಪಚಾರಗಳಿಂದ ಪೂಜೆಮಾಡಿಸಿದರು.

ಬಳಿಕ ವಾಸವಿ ಬಾಲಿಕೆಯು ಅವರೊಡನೆ, 'ಗುರುದೇವಾ! ಜನನೀಜನಕರೇ! ಆತ್ಮಬಂಧುಗಳೇ! ಈ ದಿನ ನಾನು ಈ ದೇವಾಲಯದಲ್ಲಿ ಏಕಾಂಗಿಯಾಗಿರುವೆನು. ನನಗೆ ಯಾವ ವಿಧದ ರಕ್ಷಣೆಯನ್ನು ಏರ್ಪಡಿಸಬೇಡಿ', ಎಂದು ಅದೇಶಿಸಿದಳು. ಅವಳ ನುಡಿಗಳನ್ನು ಕೇಳಿ ಎಲ್ಲರೂ ವಾಸವಿ ಬಾಲೆಯ ಮಹತ್ವಗಳನ್ನು ಕುರಿತು ಮೆಚ್ಚಿಕೊಳ್ಳುತ್ತಾ ನಿಶ್ಚಿಂತರಾಗಿ ತಮ್ಮ ತಮ್ಮ ಮನೆಗಳಿಗೆ ಹಿಂದಿರುಗಿದರು. ಆ ವಾಸವಿಯು ವಿಂಧ್ಯವಾಸಿನಿದೇವಿಯ ಸನ್ನಿಧಿಯಲ್ಲಿ ಪದಾಸನಸ್ಥಳಾಗಿ ಧ್ಯಾನಮಗ್ನಳಾದಳು. ಆ ವಿಷ್ಣುವರ್ಧನ ನೃಪಾಲನ ಹಣೆಯ ಬರಹದಂತೆಯೇ ಸೂರ್ಯನೂ ಅಸ್ತಮಿಸಿದನು. ಆ

ಚಕ್ರವರ್ತಿಯ ಅಜ್ಞಾನದಂತೆ ಕತ್ತಲೆಯೂ ಆವರಿಸಿತು. ಗಗನಸ್ಪರ್ಶಿಗಳಾಗುತ್ತಿರುವ ಆರ್ಯವೈಶ್ಯರ ಕೀರ್ತಿಕಲ್ಪಲತಾ ಸುಮಮಂಜರಿಗಳಂತೆ ತಾರೆಗಳು ಮಿನುಗಿದವು.

**ವಾಸವಿಯನ್ನು ಬಂಧಿಸಲು ಬಂದ ವಿಕ್ರಮಕೇಸರಿಯು ಭಕ್ತನಾಗಿ ಪರಿವರ್ತಿತನಾಗುವುದು.**

ವಾಸವಿಯನ್ನು ಬಂಧಿಸುವುದಕ್ಕೆ ಯುಕ್ತಸಮಯಕ್ಕಾಗಿ ಎದುರುನೋಡುತ್ತಿದ್ದ ವಿಷ್ಣುವರ್ಧನನ ಸೇನಾನಿಯಾದ ವಿಕ್ರಮಕೇಸರಿಗೆ ಒಳ್ಳೆಯ ಅವಕಾಶವು ಲಭಿಸಿತು. ಅವನು ಕಳ್ಳನಂತೆ ದೇವಾಲಯದೊಳಗೆ ಪ್ರವೇಶಿಸಿದನು. ಅಲ್ಲಿ ಏಕಾಂತದಲ್ಲಿ ಧ್ಯಾನನಿಮಗ್ನಳಾಗಿ, ಮೂರ್ತೀಭವಿಸಿದ ಪ್ರಶಾಂತತೆಯಂತಿರುವ ವಾಸವಿಯನ್ನು ವೀಕ್ಷಿಸಿದನು. ಆಕೆಯನ್ನು ಬಂಧಿಸಲು ಮುನ್ನಡಿಯಿಡುವಷ್ಟರಲ್ಲಿ ಆಕಸ್ಮಿಕವಾಗಿ ಆಕೆಯ ಶರೀರದಿಂದ ಕೋಟಿಮಿಂಚುಗಳಂತಿರುವ ಪ್ರಕಾಶವು ಒಮ್ಮೆಗೇ ಪ್ರಕಟವಾಯಿತು. ದುರ್ನಿರೀಕ್ಷ್ಯವಾದ ಆ ಅದ್ಭುತ ಕಾಂತಿಯನ್ನು ವಿಕ್ರಮಕೇಸರಿಯು ನೋಡದಾದನು. ಕಣ್ಣುಗಳಿಗೆ ಮಬ್ಬು ಆವರಿಸಿತು. ಎಲ್ಲಕಡೆ ಬರೀಕತ್ತಲೆ. ಅವನಿಗ ಪ್ರಪಂಚವೆಲ್ಲವೂ ಅಂಧಕಾರಮಯವಾಗಿ ಕಂಡಿತು. ನೇತ್ರಗಳಲ್ಲಿ ಅಸಹನೀಯವಾದ ಉರಿ, ನೋವು ಕಾಣಿಸಿಕೊಂಡಿತು. ನಾನು ಕುರುಡನಾದೆನೆಂದು ಗ್ರಹಿಸಿದನು. ತನ್ನ ದುಷ್ಚರ್ಯೆಗೆ ಅದು ತಕ್ಕಫಲವೆಂದು ನಿಶ್ಚಯಿಸಿಕೊಂಡನು. ಕೂಡಲೇ ವಾಸವಿ ಕನ್ಯಕೆಯ ಚರಣಗಳಲ್ಲಿ ಮಣಿದು ಘೋರವಾಗಿ ವಿಲಪಿಸತೊಡಗಿದನು. 'ಅಮ್ಮಾ! ಓ ವಾಸವಿ ಕನ್ಯಕಾ ದೇವಿಯೇ! ನೀನು ಜಗನ್ಮಾತೆಯಾದ ಆದಿಪರಾಶಕ್ತಿ. ಅಖಿಲ ಜೀವಿಗಳನ್ನು ನಿನ್ನ ಮಾಯಾಪಾಶದಿಂದ ಬಂಧಿಸಿ ಆಟದ ಗೊಂಬೆಗಳಂತೆ ಆಡಿಸುವ ಪರಾಶಕ್ತಿಯಾದ ನಿನ್ನನ್ನು ಅತ್ಯಂತ ಅಲ್ಪನಾದ ನಾನು ಬಂಧಿಸಲು ಅಜ್ಞಾನವಶನಾಗಿ ಹವಣಿಸಿದೆ. ಬ್ರಹ್ಮಾದಿಗಳಿಗೇ ಅರಿಯಲಶಕ್ಯವಾದ ನಿನ್ನ ಮಹಿಮೆಯನ್ನು ತಿಳಿದುಕೊಳ್ಳಲು ನಾನೆಷ್ಟರವನು? ಮಾತೇ! ನನ್ನ ಪಾಪಕ್ಕೆ ಪರಿಹಾರವಿಲ್ಲ. ಆದರೂ ಕರುಣಾಸಮುದ್ರಳಾಗಿರುವ ನೀನು ನನ್ನ ಮೇಲೆ ಕನಿಕರಿಸಿ ನನ್ನ ದೋಷಗಳನ್ನು ಮನ್ನಿಸು. ನನಗೆ ಜ್ಞಾನದೃಷ್ಟಿಯನ್ನು ಪ್ರಸಾದಿಸು ಅಬ್ಬಾ! ಅಸಹನೀಯವಾದ ಈ ಬಾಧೆಯನ್ನು ಉಪಶಮನಗೊಳಿಸಿ ರಕ್ಷಿಸು. ಇಲ್ಲವೇ ನನ್ನನ್ನು ಕೂಡಲೇ ಶಿಕ್ಷಿಸಿ ದಾಟಿಸು. ಹೇ ಪರಾಶಕ್ತಿ! ನಿನಗೆ ನಮನಗಳು. ಹೇ ಸರ್ವಲೋಕ ಶರಣ್ಯೇ! ನನ್ನನ್ನು ಕಾಪಾಡು; ಎಂದು ದೀನಾತಿದೀನನಾಗಿ ವಿಧ ವಿಧವಾಗಿ ಪ್ರಾರ್ಥಿಸಿದನು. ಆಗ ಶರಣಾಗತರಕ್ಷಿಯಾದ ವಾಸವಿ

ಕನ್ಯಕೆಯು ಅವನನ್ನು ನೋಡಿ, 'ಕುಮಾರಾ ವಿಕ್ರಮಕೇಸರಿ! ಪಶ್ಚಾತ್ತಾಪಕ್ಕೆ ಮೀರಿದ ಪ್ರಾಯಶ್ಚಿತ್ತವಿಲ್ಲ. ನಿನಗೆ ದೃಷ್ಟಿಯನ್ನು ಪ್ರಸಾದಿಸುತ್ತಿರುವೆ. ನಿರಂತರವೂ ದೇವೀಧ್ಯಾನ ಮಗ್ನನಾಗಿ ಕೀರ್ತಿವಂತನಾಗಬಲ್ಲೆ; ಎಂದು ಆಶೀರ್ವದಿಸಿದಳು. ಕೂಡಲೇ ವಿಕ್ರಮಕೇಸರಿಗೆ ಅಂಧತ್ವವು ನಿವಾರಿಸಲ್ಪಟ್ಟಿತು. ಅವನು ಪ್ರಶಾಂತ, ಪ್ರಸನ್ನಮೂರ್ತಿಯಾದ ವಾಸವಿಯನ್ನು ವೀಕ್ಷಿಸಿ ಪರಿಪರಿ ವಿಧಗಳಲ್ಲಿ ಸ್ತುತಿಸಿ ಆಕೆಗೆ ಪರಮಭಕ್ತನಾಗಿ ಪರಿವರ್ತನೆಗೊಂಡನು. ಬಳಿಕ ಆ ದೇವಿಯ ಅನುಮತಿ ಪಡೆದು ತನ್ನ ನೆಲೆಗೆ ಹೊರಟು ಹೋದನು.

## ಆತ್ಮಾರ್ಪಣೆಗೆ ಸಂಸಿದ್ಧರಾದ ಆರ್ಯವೈಶ್ಯರ ನಗರಪ್ರದಕ್ಷಿಣೆ:

ಮರುದಿನ ಉದಯ ಸಮಯದಲ್ಲಿ ಆರ್ಯವೈಶ್ಯರೆಲ್ಲರೂ ಗುರು ಭಾಸ್ಕರಾಚಾರ್ಯರು ಹೇಳಿದಂತೆ ಅಭ್ಯಂಜನ ಸ್ನಾನಮಾಡಿ ಜ್ಞಾನ, ತ್ಯಾಗ, ವೈರಾಗ್ಯ ಚಿಹ್ನೆಗಳಾದ ಸಂಧ್ಯಾರುಣ ವರ್ಣದ ಕಾಷಾಯವಸ್ತ್ರಗಳನ್ನು ಧರಿಸಿದರು. ಆಶ್ರಿತರಿಗೆ ವಿಪ್ರರಿಗೆ ಅನೇಕ ಬಗೆಯ ದಾನಗಳನ್ನಿತ್ತು ವಿಂಧ್ಯವಾಸಿನಿ ದೇವಾಲಯಕ್ಕೆ ಬಂದು ಪರಾಂಬಿಕೆಯನ್ನು ಅಚಲ ಭಕ್ತಿಯಿಂದ ಅರ್ಚಿಸಿ ವಾಸವಿ ಕನ್ಯಕಾಮಣಿಯೊಡಗೂಡಿ ನಗರಪ್ರದಕ್ಷಿಣೆಗಾಗಿ ಹೊರಟರು. ವೈಶ್ಯ ರಾಜಬಂಧುಗಳು ಅಧಿಕಾರಿಗಳು, ರಥ ಗಜ, ತುರಗಗಳನ್ನು ಅಧಿರೋಹಿಸಿದರು. ರಾಜಕುಮಾರಿಯಾದ ವಾಸವಿಯನ್ನು ರತ್ನಮಯ ಪಲ್ಲಕ್ಕಿಯಲ್ಲಿ ಎತ್ತಿಕೊಂಡು ನಗರೇಶ್ವರಾಲಯವನ್ನು ಸೇರಿಕೊಂಡರು. ಅಲ್ಲಿ ಗೌರೀ ನಗರೇಶ್ವರರಿಗೆ ಮಹಾನ್ಯಾಸ ಪೂರ್ವಕವಾಗಿ ರುದ್ರಾಭಿಷೇಕಾದಿಗಳಿಂದ ಸಮಸ್ತೋಪಚಾರ ಪೂಜೆ ಮಾಡಿಸಿ ಕೋನಕಮಲಾಜನಾರ್ದನ ದೇವಾಲಯಗಳಿಗೆ ಆಗಮಿಸಿದರು. ಅಲ್ಲಿ ಲಕ್ಷ್ಮೀನಾರಾಯಣರನ್ನು ಅಪೂರ್ವ ಭಕ್ತಿಶ್ರದ್ಧೆಗಳಿಂದ ಅರ್ಚಿಸಿ ಮಂಗಳನಾದಗಳೊಡನೆ ಭೇರಿ ಮೃದಂಗಧ್ವನಿ ಸಹಿತ ವಂದಿಮಾಗಧ ವೈತಾಳಿಕರ ಸ್ತೋತ್ರ ಪಾಠಗಳೊಡನೆ ವೀಣಾ, ವೇಣು, ಮೃದಂಗ ವಾದ್ಯಗಾನದೊಡನೆ ವೇದವೇದಾಂಗವೇತ್ತರಾದ ವಿಪ್ರವರರ ಮಂತ್ರಘೋಷದೊಡನೆ ನಗರಪ್ರದಕ್ಷಿಣೆ ಮಾಡಿ ಗೌತಮೀ ತೀರದಲ್ಲಿರುವ ಭಾಸ್ಕರಾಚಾರ್ಯರ ಆಶ್ರಮವನ್ನು ಸೇರಿದರು. ಭಾಸ್ಕರಾಚಾರ್ಯರು ಬ್ರಹ್ಮಕುಂಡ ಸಮೀಪದಲ್ಲಿಯ ಸುವಿಶಾಲವಾದ ಮೈದಾನದಲ್ಲಿರುವ ಅಗ್ನಿಚಕ್ರ ಪ್ರದೇಶದಲ್ಲಿ ಜರುಗಿದ ಕುಂಡ ನಿರ್ಮಾಣವಿಧಾನವನ್ನು ತಿಳಿಸಿ ಅಲ್ಲಿ ವೈಶ್ಯರು ಆಚರಿಸಬೇಕಾದ ಭವಿಷ್ಯತ್ಕಾರ್ಯಕ್ರಮಗಳನ್ನು

ಕುರಿತು ವಿಶದವಾಗಿ ವಿವರಿಸಿದರು.

## ವಿಷ್ಣುವರ್ಧನನಿಗೆ ಅಪಶಕುನಗಳುಂಟಾಗುವುದು:

ಹೀಗೆ ವಿವರಿಸುತ್ತಿದ್ದ ಸಾಲಂಕಾಯನ ಮಹರ್ಷಿಯೊಡನೆ ಮಣಿಗುಪ್ತಾದಿಗಳು, 'ಹೇ! ಗುರುವರೇಣ್ಯಾ! ವೈಶ್ಯರ ಅಗ್ನಿಪ್ರವೇಶದ ಬಗ್ಗೆ ವಿಕ್ರಮಕೇಸರಿಯಿಂದ ಕಳಿಸಲ್ಪಟ್ಟ ವಾರ್ತೆಯನ್ನು ಕೇಳಿ ಚಕ್ರವರ್ತಿಯ ಸುಮ್ಮನಿದ್ದನೆ? ಏನು ಮಾಡಿದನು? ದಯವಿಟ್ಟು ವಿವರಿಸಿ; ಎಂದು ಪ್ರಾರ್ಥಿಸಿದರು.

ಆಗ ಸಾಲಂಕಾಯನರು ಹೀಗೆ ಉತ್ತರಿಸಿದರು. ಹೇ ವೈಶ್ಯೋತ್ತಮರೇ! ಪದ್ಮಶಯನದಲ್ಲಿ ವಿಷ್ಣುವರ್ಧನ ಚಕ್ರವರ್ತಿಗೆ ವಿಕ್ರಮಕೇಸರಿಯು ಕಳಿಸಿದ ವಾರ್ತೆಯು ತಲುಪಲು ಅವನು ಅತ್ಯಂತ ಕ್ರೋಧಾವೇಶಪೂರ್ಣನಾಗಿ ತನ್ನ ವಿಜಯಸಿಂಹ ನೆಂಬ ಮಂತ್ರಿಯನ್ನು ಕರೆದು, 'ಎಲೈ ಅಮಾತ್ಯವರ್ಯಾ! ನೀವು ಕೂಡಲೇ ಚದುರಂಗ ಬಲದೊಡನೆ ಪೆನುಗೊಂಡೆಗೆ ಹೋಗಿ ಆ ವೈಶ್ಯರ ಅಗ್ನಿಪ್ರವೇಶ ಕಾರ್ಯಕ್ರಮವನ್ನು ನಿಲ್ಲಿಸಿ. ಅವರನ್ನು ಬಂಧಿಗಳನ್ನಾಗಿ ಮಾಡಿರಿ. ನಾಳೆಯ ಪ್ರಭಾತ ವೇಳೆಗೆ ನಾವೂ ಪೆನುಗೊಂಡೆಗೆ ಹೊರಡುವೆವು. ವಾಸವಿಯನ್ನು ರಾಕ್ಷಸವಿವಾಹ ರೀತ್ಯಾ ವಿವಾಹವಾಗುವೆವು; ಎಂದು ಆಜ್ಞಾಪಿಸಿ ಕಳಿಸಿದನು. ಬಳಿಕ ವಿಷ್ಣುವರ್ಧನ ಚಕ್ರವರ್ತಿಯ ಅಂತಃಪುರವನ್ನು ಸೇರಿದನು. ಅವನಿಗೆ ವಿಪರೀತ ಹಸಿವಾಯಿತು. ಅಂತಃಪುರ ಕಾಂತೆಯರು ವಜ್ರ ವೈಢೂರ್ಯಖಚಿ ತವಾದ ಕಾಂಚನಪ್ರಾತೆಗಳಲ್ಲಿ ಸುವಾಸನಾಯುಕ್ತ ಷಡ್ರಸೋಪೇತವಾದ ಭೋಜನವನ್ನು ತಂದಿರಿಸಿದರು. ರಾಜನು ಭುಜಿಸಲಾರಂಭಿಸಿದನು. ಕೂಡಲೇ ಆ ಭೋಜ್ಯಪದಾರ್ಥಗಳೆಲ್ಲ ದುರ್ಗಂಧಯುಕ್ತವಾಗಿ, ದುರ್ಮಾಂಸಮಯವಾಗಿ, ರಕ್ತಯುಕ್ತವಾಗಿ, ಅಶುದ್ಧಕರವಾಗಿ ಕಾಣಿಸಿದವು. ಬಳಿಕ ಚಕ್ರವರ್ತಿಯು ಆ ಅನ್ನವನ್ನು ಬಿಟ್ಟು ದಾಹಗೊಂಡವನಾಗಿ ಕ್ಷೀರಪಾತ್ರೆಯನ್ನು ಕೈಯಲ್ಲಿ ಹಿಡಿದನು. ಆದರೆ ಆ ಪಾತ್ರೆಯಲ್ಲಿ ಹಾಲಿನಲ್ಲಿ ಅತ್ತಿತ್ತ ಹರಿದಾಡುವ ಹುಳುಗಳು ಕಾಣಿಸಿದವು. ಆಗ ವಿಷ್ಣುವರ್ಧನನು ಕ್ರೋಧಾವಿಷ್ಟನಾಗಿ ಆಹಾರ ಪಾನೀಯಗಳನ್ನು ತ್ಯಜಿಸಿ ಎದ್ದು ಭೋಜನ ಪದಾರ್ಥಗಳನ್ನು ಸಿದ್ಧಗೊಳಿಸಿದ ಅಡಿಗೆಯವರನ್ನು ಕಠಿಣವಾಗಿ ಶಿಕ್ಷಿಸಹೊರಟನು. ಅವರು ಭಯಕಂಪಿರತಾಗಿ, 'ಮಹಾಪ್ರಭು! ನಾವು ಅನುದಿನದಂತೆಯೇ ರುಚಿಯಾಗಿ ಶುಚಿಯಾಗಿ ಇರುವಂತೆ ಈ ಆಹಾರ ಪದಾರ್ಥಗಳನ್ನು ತಯಾರುಮಾಡಿದೆವು.

ನಾವು ಯಾವ ಪಾಪವನ್ನು ಅರಿಯೆವು. ಪ್ರಮಾಣ ಮಾಡಿ ಹೇಳುತ್ತಿರುವೆವು; ಎಂದು ಪ್ರಭುವಿನ ಪಾದಗಳ ಮೇಲೆ ಬಿದ್ದು ಪ್ರಾಣರಕ್ಷಣೆಗಾಗಿ ಬೇಡಿಕೊಂಡರು.

ಚಕ್ರವರ್ತಿಯ ಜರುಗಿದ ವಿಪರೀತ ಪರಿಣಾಮಗಳನ್ನು ಕುರಿತು ಚಿಂತಿಸುತ್ತಾ ಶಯನಾಗಾರವನ್ನು ಸೇರಿ ತಲ್ಪದ ಮೇಲೆ ಮಲಗಿದನು. ಅವನ ಮನಸ್ಸೆಲ್ಲವೂ ವಿಕಲ್ಪಗೊಂಡಿತು. ಅಷ್ಟರಲ್ಲಿ ಅವನಿಗೆ ಸ್ವಪ್ನದಲ್ಲಿ ಕರಾಳಮುಖ, ಶೂಲಹಸ್ತ, ಚತುರ್ಭುಜಗಳು, ಕಾಡಿಗೆಯ ಬೆಟ್ಟದಂತಿರುವ ಕಪ್ಪನೆಯ ಶರೀರ ಕಾಂತಿ, ಘೋರವಾದ ದಂಷ್ಟ್ರಗಳುಳ್ಳ ವಿಕೃತಾಕಾರಿಣಿಯಾದ ಕಾಳಿಕಾಮಾತೆಯು ಸಾರ್ವಭೌಮನ ಶಿರಸ್ಸನ್ನು ಶೂಲದಿಂದ ಇರಿಯುತ್ತಿರುವಂತೆಯೂ, ಪಾದಗಳಿಂದ ಅವನ ಎದೆಯನ್ನು ಕತ್ತನ್ನೂ ತುಳಿಯುತ್ತಲಿರುವಂತೆಯೂ ಗೋಚರಿಸಿತು. ಚಕ್ರವರ್ತಿಯು ಭಯಭೀತನಾಗಿ ನಡುಗುತ್ತ ಥಟ್ಟನೆ ಎದ್ದು ಹಾಹಾಕಾರ ಮಾಡಿದನು. ಅದನ್ನು ಕೇಳಿ ಅಂತಃಪುರದ ಪರಿವಾರದವರೆಲ್ಲಿ ಓಡೋಡಿ ಅಲ್ಲಿಗೆ ಬಂದರು. ಈ ವಾರ್ತೆಯನ್ನು ಕೇಳಿ ಸೇನಾಧಿಪತಿಗಳೂ, ಮಂತ್ರಿಗಳೂ ಸಹ ಬಂದರು. ಚಕ್ರವರ್ತಿಗೆ ಉಂಟಾದ ಈ ವಿಚಿತ್ರಾನುಭವಗಳು ತಮ್ಮ ಪ್ರಭುವಿನಲ್ಲಿ ಉದಿಸಿದ ಆಂದೋಳನಾಧಿಕ್ಯತೆಯಿಂದ ಏರ್ಪಟ್ಟವೆಂದು ನಿರ್ಣಯಿಸಿ ಶಾಂತಿಗಾಗಿ ಗ್ರಾಮದ್ವಾರ ಸೀಮೆಯ ಶಕ್ತಿಗಳಿಗೂ, ಗ್ರಾಮದೇವತೆಗಳಿಗೂ ಅನೇಕ ವಿಧವಾದ ಜೀವಬಲಿಗಳನ್ನು ಸಮರ್ಪಿಸಲು ಏರ್ಪಾಟುಗಳನ್ನು ಮಾಡಿದರು. ಆನಂತರ ವಿಷ್ಣುವರ್ಧನನು ಸ್ವಸ್ಥಚಿತ್ತನಾಗಿ ಪೆನುಗೊಂಡೆ ಪಟ್ಟಣಕ್ಕೆ ಹೊರಡಲನುವಾದನು.

## ಪೆನುಗೊಂಡೆಗೆ ಮುತ್ತಿಗೆ ಹಾಕಿದ ವಿಜಯಸಿಂಹನಿಗೆ ಎದುರ್ಗೊಂಡ ವಿಕ್ರಮಕೇಸರಿಯು ಅವನಿಂದ ಹತನಾಗುವುದು:

ಇಲ್ಲಿ ಚಕ್ರವರ್ತಿಯಿಂದ ಕಳುಹಿಸಲ್ಪಟ್ಟು ಪೆನುಗೊಂಡೆಗೆ ಸೈನ್ಯಸಮೇತನಾಗಿ ತಾನು ಮೊದಲೇ ಬಂದ ವಿಜಯಸಿಂಹನು ಪೆನುಗೊಂಡೆನಗರಕ್ಕೆ ಮುತ್ತಿಗೆಹಾಕಿದನು. ವಾಸವಿ ಕನ್ಯಕೆಯ ಭಕ್ತರಾಗಿ ಪರಿವರ್ತನೆಗೊಂಡ ವಿಕ್ರಮಕೇಸರಿಯು ಮತ್ತು ತನ್ನ ಸಾವಿರಾರು ಸೈನಿಕರು ಆರ್ಯವೈಶ್ಯರ ಅಹಿಂಸಾದೀಕ್ಷೆಗೆ ಭಂಗ ಬರದಂತೆ ಕಾಪಾಡಲು ವಿಜಯಸಿಂಹನ ಸೈನ್ಯಗಳನ್ನು ನಗರದ ಹೊರಭಾಗದಲ್ಲಿಯೇ ತಡೆದರು.

ಅನಂತರ ವಿಕ್ರಮಕೇಸರಿಯು ಹೊಸದಾಗಿ ಬಂದ ಚಕ್ರವರ್ತಿಯ ಸೈನ್ಯಗಳಿಗೆ ಪೆನುಗೊಂಡೆಯಲ್ಲಿ ಜರುಗದಿ ವೃತ್ತಾಂತವನ್ನು ವಾಸವಿ ಕನ್ಯಕೆಯ ಮಹತ್ವವನ್ನು ವೈಶ್ಯರ ಅಹಿಂಸಾವ್ರತದೀಕ್ಷೆಯನ್ನು ಕುರಿತು ಸವಿವರವಾಗಿ ಬಿನ್ನವಿಸಿಕೊಂಡು, ದುಷ್ಟನಾದ ಚಕ್ರವರ್ತಿಗಾಗಿ ಪಾಪಮಾಡಲೆಳಸಲು ಹೋಗಬಾರದೆಂದು ಪ್ರಾರ್ಥಿಸಿದನು, ವಿಕ್ರಮಕೇಸರಿಯು ಹೇಳಿದ ವಿಷಯಗಳನ್ನು ಕೇಳಿ ವಿಜಯಸಿಂಹನ ಸೈನಿಕರೆಲ್ಲರು ತಮ್ಮ ಚಕ್ರವರ್ತಿಯನ್ನು ದೂಷಿಸುತ್ತ ವಾಸವಿ ಕನ್ಯಕೆಯ ಭಕ್ತರಾಗಿ ಪರಿವರ್ತನೆಗೊಂಡರು. ಆದರೆ ವಿಜಯಸಿಂಹನು ಮಾತ್ರ ಕತ್ತಿಯನ್ನೆಳೆದು ನಿರಾಯುಧನಾಗಿದ್ದ ವಿಕ್ರಮಕೇಸರಿಯ ಮೇಲೆ ಅಕಸ್ಮಾತ್ತಾಗಿ ಎರಗಿ ಅವನನ್ನೂ ಮತ್ತೆ ಕೆಲವು ಮಂದಿಸೈನಿಕರನ್ನೂ ವಧಿಸಿಬಿಟ್ಟನು. ಅನ್ಯಾಯವಾದ ಈ ಕ್ರೂರಕೃತ್ಯವನ್ನು ನೋಡಿದ ಸೈನಿಕರ ಹೃದಯಗಳು ಕ್ರೋಧಾಕ್ರೋಶಗಳಿಂದ ಭಗ್ಗನೆ ಉರಿದುಹೋದವು. ಅವರೆಲ್ಲರೂ ಉನ್ಮತ್ತರಂತೆ ವಿಜೃಂಭಿಸಿ ವಿಜಯಸಿಂಹನನ್ನು ಸುತ್ತಲೂ ಮುತ್ತಿ ಆ ದುಷ್ಟನನ್ನು ತುಂಡುತುಂಡಾಗಿ ಕತ್ತರಿಸಿದರು. ಬಳಿಕ ಅವರೆಲ್ಲರು ವೈಶ್ಯರ ತ್ಯಾಗದ್ದೀಕ್ಷೆಯನ್ನು ವಾಸವಿಕನ್ಯಕಾ ಮಹತ್ವವನ್ನು ಸಾವಿರ ಬಾಯಿಗಳಿಂದ ಕೀರ್ತಿಸುತ್ತ, ವೈಶ್ಯರು ಸಮಾವಿಷ್ಟರಾಗಿದ್ದ ಭಾಸ್ಕರಾಚಾರ್ಯರ ಆಶ್ರಮ ಪ್ರಾಂಗಣವನ್ನು ಸೇರಿದರು.

**ವಿಕ್ರಮಕೇಸರಿ ವಂಶೀಯರು ವೀರಮುಷ್ಟಿಗಳಾಗಿ ಪ್ರಸಿದ್ಧರಾಗುವಿಕೆ:**

ನಡೆದ ವೃತ್ತಾಂತವೆಲ್ಲವನ್ನು ಕೇಳಿದ ವಾಸವಿ ಕನ್ಯಕೆಯೂ ವೈಶ್ಯರನ್ನು ನೋಡಿ, 'ಓ ಮಹಾವೈಶ್ಯರೇ! ನಮಗಾಗಿ ಪ್ರಾಣಾರ್ಪಣೆ ಮಾಡಿವ ವಿಕ್ರಮಕೇಸರಿಗೂ ಅವನ ವೀರಭಟರಿಗೂ ವೈಶ್ಯಕುಲವೆಷ್ಟೋ ಋಣಿಯಾಗಿದೆ. ಇನ್ನು ಮುಂದೆ ಆ ವೀರಭಟರ **ವಂಶಜರು ವೀರಮುಷ್ಟಿಗಳೆಂಬ ಹೆಸರಿನಲ್ಲಿ ಪ್ರಸಿದ್ಧರಾಗುವರು.** ವಂಶಪಾರಂಪರ್ಯವಾಗಿ ಅವರ ಕುಟುಂಬಗಳನ್ನು ವೈಶ್ಯರು ಪೋಷಿಸುತ್ತಿರಬೇಕು. ವೀರಮುಷ್ಟಿಗಳು ವೈಶ್ಯರ ಶಭಕಾರ್ಯಗಳಲ್ಲಿ ತಮ್ಮ ತ್ಯಾಗವೀರ ಲಾಂಛನಗಳಿಂದ ಕೂಡಿದ ಪ್ರಭೆಗಳನ್ನು ಕಟ್ಟಿಕೊಂಡು ಬಂದು ವೈಶ್ಯರಿಗೆ ಸೇವೆ ಸಲ್ಲಿಸುತ್ತಿರಬೇಕು. ಇದು ಮುಂದೆ ವೈಶ್ಯರಿಗೆ ಕುಲಾಚಾರವಾಗಿ ವರ್ಧಿಸುವುದು; ಎಂದು ಪ್ರಕಟಿಸಿದಳು. ಆಗ ಅಲ್ಲಿದ್ದ ಪ್ರಜಾಸಮೂಹವೆಲ್ಲ ಆಶ್ಚರ್ಯಚಕಿತವಾಗಿ ಶ್ರೀವಾಸವಿ ಕನ್ಯಕಾದೇವಿ ಪ್ರಬೋಧಿಸಿದ ಅಹಿಂಸಾಯುತ ನೂತನ ರಣವಿಧಾನ ಪ್ರಭಾವದಿಂದ ಸಾವಿರಾರು ಸೈನಿಕರಲ್ಲಿಯ

ದುಷ್ಟತ್ವವು ಅಳಿಯಿತು, ಹಿಂಸಾ ಪ್ರವೃತ್ತಿ ನಾಶವಾಯಿತು. ತ್ಯಾಗ ಶಕ್ತಿಯು ವೃದ್ಧಿಗೊಂಡಿತು. ಇನ್ನು ಮುಂದೆ ಲೋಕ ಕಲ್ಯಾಣಕ್ಕಾಗಿ ಶ್ರೀವಾಸವಿ ಕನ್ಯಕೆಯು ತೋರಿಸಿದ ಈ ವಿನೂತನ ಮಾರ್ಗವೇ ಪ್ರಪಂಚಕ್ಕೆ ಅನುಸರಣೀಯವು, ಆಚರಣೀಯವು, ಆದರ್ಶಪ್ರಾಯವು, ಸರ್ವೋತ್ತಮವು ಎಂದು ಎಲ್ಲರೂ ಮುಕ್ತಕಂಠದಿಂದ ಕೀರ್ತಿಸುತ್ತ, ಅಮರರಾದ ವೀರಮುಷ್ಟಿಗಳ ಹೆಸರಿನಲ್ಲಿಯೂ, ಆದಿ ಪರಾಂಬಿಕಾವತಾರಿಣಿಯಾದ ವಾಸವಿ ಕನ್ಯಕೆ ಹೆಸರಿನಲ್ಲಿಯೂ ದಶದಿಶೆಗಳು ಮೊಳಗುವಂತೆ ವಿಜಯಘೋಷ ಮಾಡಿದರು.

## 102 ಗೋತ್ರಗಳ ಆರ್ಯವೈಶ್ಯ ಅಗ್ನಿಪ್ರದೇಶಕ್ಕೆ ಸಂಸಿದ್ಧತೆ:

## ಅಗ್ನಿದೇವನ ಉದಾಸೀನತೆ:


ಅನಂತರ ಆರ್ಯವೈಶ್ಯರೂ, ಅನ್ಯಪ್ರಜೆಗಳೂ ಬ್ರಹ್ಮಕುಂಡಕ್ಕೆ ಅನತಿದೂರದಲ್ಲಿರುವ ಆತ್ಮಾಹುತಿ ಯಜ್ಞಶಾಲೆಗೆ ಹೊರಟರು. ಸಕಲ ಪ್ರಾಣಿಭಯಂಕತನಾದ ಅಗ್ನಿ ಹೋತ್ರನು ಸಮಸ್ತ ಅಗ್ನಿಕುಂಡಗಳಲ್ಲಿ ಭಯಂಕರ ಜ್ವಾಲಾಮಾಲೆಗಳಿಂದ ಮೇಲೇರಿ ಆಕಾಶವನ್ನು ಮುಟ್ಟುವ ಜ್ವಾಲೆಗಳಿಂದ ಪ್ರಕಾಶಿಸುತ್ತಿದ್ದನು. ಶ್ರೀವಾಸವಿ ಕನ್ಯಕೆಯು ಆದರ್ಶಮಯ ಜೀವನವನ್ನು ನಡೆಸುವುದಕ್ಕೆ ಅನುವಾದ ಧರ್ಮಸಾರವನ್ನು ಉಪದೇಶಿಸಿ ಆತ್ಮೀಯರೆಲ್ಲರಿಂದ ಬೀಳ್ಕೊಂಡಳು. ಆಕೆಯ ಆದೇಶವನ್ನು ಅನುಸರಿಸಿ 102 ಪುಣ್ಯದಂಪತಿಗಳು, ಕುಂಡಗಳನ್ನು ನಿರ್ಮಿಸಿದ ಮಲ್ಲರನು ತಮಗಾಗಿ ನಿರ್ದೇಶಿಸಲ್ಪಟ್ಟಿದ್ದ ಅಗ್ನಿಕುಂಡಗಳನ್ನು ಸಮಾಪಿಸಿದರು. ಅವರು ತಮ್ಮ ತಮ್ಮ ಕುಂಡಗಳಿಗೆ 3 ಬಾರಿ ಪ್ರದಕ್ಷಿಣೆ ಹಾಕಿ ಅಗ್ನಿಯನ್ನು ಪ್ರವೇಶಿಸುವುದಕ್ಕೆ ಸಂಸಿದ್ಧರಾಗಿ ನಿಂತರು. ಜಾಜ್ವಲ್ಯಮಾನವಾಗಿ ಪ್ರಕಾಶಿಸುತ್ತಿದ್ದ ಆ ಅಗ್ನಿಕುಂಡಗಳ ಮಧ್ಯೆ ಸಮಸ್ತ ಗ್ರಹೋಪಗ್ರಹಗೋಳಗಳ ಮಧ್ಯೆ ಬೆಳಗುತ್ತಿರುವ ಪರಾಶಕ್ತಿಯಂತೆ ಶೋಭಿಸುತ್ತ ವಾಸವಿ ಕನ್ಯಕೆಯು ತನಗಾಗಿ ಸಿದ್ಧಗೊಳಿಸಿದ್ದ ಪ್ರಧಾನಾಗ್ನಿ ಕುಂಡದ ಬಳಿ ಧ್ಯಾನನಿಮಗ್ನಳಾಗಿ ನಿಂತಳು.

ಆಗ ಅಗ್ನಿಹೋತ್ರನು ತನ್ನ ದಹನಸಾಮರ್ಥ್ಯವನ್ನು ಆ ಕ್ಷಣದಲ್ಲಿ ತೊರೆದು ತಣ್ಣಗಾಗಿ ಬಿಟ್ಟನು. ಆ ಬೆರಗಿನ ದೃಶ್ಯ ಕಂಡು ಜನರೆಲ್ಲರು ಹಿಗ್ಗಿದರು. ಆಗ ವಾಸವಿ ಕನ್ಯಕೆಯು ತಣ್ಣಗಾಗಿ ಹೋದ ಕುಂಡಗಳನ್ನು ನೋಡಿ ಅನಲದೇವನನ್ನು ಉದ್ದೇಶಿಸಿ, 'ಹೇ ಸ್ವಾಹಾವಲ್ಲಭಾ! ನೀನು ಕೂಡಲೇ

ಪ್ರತ್ಯಕ್ಷನಾಗಿ ನನಗೆ ಸಾನ್ನಿಧ್ಯವನ್ನು ಕೊಡುವಂತಾಗಾಲಿ; ಎಂದು ಆದೇಶಿಸಿದಳು.

ಆಗ ಅಗ್ನಿಹೋತ್ರನು ಮತ್ತಾರಿಗೂ ಕಾಣದವನಾಗಿ ವಾಸವಿದೇವಿಗೆ ಮಾತ್ರವೇ ಕಾಣಿಸುತ್ತ, 'ಹೇ ಜಗನ್ಮಾತೇ! ಪರಾಶಕ್ತಿಯಾದ ನಿನ್ನನ್ನೂ, ಧರ್ಮಪರಾಯಣರೂ, ತ್ಯಾಗಮೂರ್ತಿಗಳೂ ಆದ ಈ ವೈಶ್ಯಶ್ರೇಷ್ಠರನ್ನೂ ನಾನು ದಹಿಸಲಾರೆನು! ಇಂಥವರನ್ನು ದಹಿಸಿದ ಪಾಪವು ನನ್ನನ್ನು ಕಟ್ಟಿಹಾಕಿ ಮುಗಿಸಿಬಿಡುವುದು. ಆದ್ದರಿಂದಲೇ ಮಹಾತ್ಮರ ತಂಟೆಗೆ ಹೋಗಲು ಭಯಪಡುತ್ತಿರುವೆ; ಎಂದು ಎಲ್ಲರಿಗೂ ಕೇಳಿಸುವಂತೆ ನುಡಿದನು. ಆ ವಚನಗಳನ್ನು ಕೇಳಿದ ಸಮಸ್ತ ಜನರು ಆಶ್ಚರ್ಯಮಗ್ನಮಾನಸರಾದರು.

ಅನಂತರ ವಾಸವಿ ಕನ್ಯಕೆಯು ಅಗ್ನಿಹೋತ್ರನೊಡನೆ, 'ಹೇ ಅಗ್ನಿದೇವಾ! ನೀನು ಸರ್ವಲೋಕವ್ಯಾಪಕನು. ಸರ್ವಭೂತಾಂತರಾತ್ಮಾನು. ಭೂತಭವಿಷ್ಯದ್ವರ್ತಮಾನಗಳನ್ನು




102 ಗೋತ್ರಗಳ ಆರ್ಯವೈಶ್ಯ ದಂಪತಿಗಳು ವಾಸವಿ ಕನ್ಯಕೆಯೊಡಗೂಡಿ ಅಗ್ನಿಪ್ರವೇಶ ಮಾಡುತ್ತಿರುವುದು.

ಬಲ್ಲವನು. ಈಗ ಪೂರ್ವದಲ್ಲಿ ಕೈಲಾಸವಾಸಿಗಳಾಗಿದ್ದ ಸಿದ್ಧವೈಶ್ಯರು ಲೋಕ ಕಲ್ಯಾಣಾರ್ಥವಾಗಿ ಧರೆಯಲ್ಲಿ ಅವತರಿಸಿದರು. ಹಿಂದೆ ತ್ರಿಮೂರ್ತಿಗಳೂ, ನಾನೂ ಇವರಿಗಿತ್ತ ವರಗಳನ್ನು ಅನುಸರಿಸಿ ಇವರಿಗೀಗ ಅಗ್ನಿಮುಖೇನ ಕೈವಲ್ಯವನ್ನು ಪ್ರಸಾದಿಸುತ್ತಿರುವೆ. ಭಂಡಾಸುರಾಂಶದಿಂದ ಹುಟ್ಟಿರುವ ವಿಷ್ಣುವರ್ಧನನನ್ನು ನಿಮಿತ್ತವಾಗಿ ಮಾಡಿಕೊಂಡು ಈ ಕಲಿಯುಗದಲ್ಲಿ ಅಧರ್ಮದುಷ್ಪತ್ವಗಳನ್ನು ತ್ಯಾಗ ಅಹಿಂಸೆಗಳ ಪ್ರಭಾವದಿಂದ ಅಳಿಸಿಹಾಕಿ ವರ್ಣಾಶ್ರಮಗಳ ಆಚಾರಗಳನ್ನು ರಕ್ಷಿಸಿ ಧರ್ಮಪ್ರತಿಷ್ಠಾಪನೆ ಮಾಡುವುದಕ್ಕಾಗಿ ಏರ್ಪಟ್ಟ ನನ್ನ ಅವತಾರಕಾರ್ಯವು ಇಲ್ಲಿಗೆ ಮುಕ್ತಾಯಗೊಂಡಿತು. ಪಾಪಾತ್ಮನಾದ ವಿಷ್ಣುವರ್ಧನನ ಮರಣ ಸಮಯವು ಸಮೀಪಿಸುತ್ತಿದೆ. ಆದ್ದರಿಂದ ನೀನು ನನ್ನ ಆದೇಶಾನುಸಾರವಾಗಿ ನಿನ್ನ ಕರ್ತವ್ಯವನ್ನು ನಿರ್ವಹಿಸಲು, ಕಾಲವನ್ನು ವಿಲಂಬಗೊಮಾಡಬೇಕು; ಎಂದು ಆಜ್ಞಾಪಿಸಿದಳು. ಆ ಬಳಿಕ ಅಲ್ಲಿರುವ ಪ್ರಜೆಗಳನ್ನು ಕಂಡು 'ಹೇ! ಭಕ್ತಶ್ರೇಷ್ಠರೇ! ಬ್ರಹ್ಮ ವಿಷ್ಣು ಮಹೇಶ್ವರರು ವಾಣೀರಮಾಪಾರ್ವತೀ ಮೊದಲಾದ ಸಮಸ್ತದೇವತೆಗಳು ನಾನೇ ಆಗಿರುವೆ. ಇಷ್ಟೇ ಏಕೆ? ಸಮಸ್ತ ಚರಾಚರ ಸೃಷ್ಟಿಯೆಲ್ಲ ನನ್ನ ಏಕಾಂಶಸಂಭೂತವಾಗಿದೆ. ನಾನಲ್ಲದಿರುವುದು ಏನೂ ವಿಶ್ವವಿಶ್ವಾಂತರಾಳದಲ್ಲಿಲ್ಲವೆಂದು ತಿಳಿಯಿರಿ; ಎಂದು ನುಡಿದಳು. ಆಗ ಜನರೆಲ್ಲರು, 'ಹೇ ದೇವದೇವೇಶ್ವರಿ! ವಿಶ್ವವೆಲ್ಲವೂ ನೀನೇ ಎಂದು ಹೇಳುತ್ತಿರುವೆ. ಅಪಾರ ಕರುಣಾಸಾಗರಿಯಾಗಿ ಅನಂತವಾದ ನಿನ್ನ ವಿಶ್ವರೂಪಸಂದರ್ಶನ ಭಾಗ್ಯವನ್ನು ನಮಗೆ ಉಂಟುಮಾಡು; ಎಂದು ಪರಿ ಪರಿ ವಿಧಗಳಲ್ಲಿ ಪ್ರಾರ್ಥಿಸಿದರು.

## ವಾಸವಿ ಕನ್ಯಕಾದೇವಿ ವಿಶ್ವರೂಪಪ್ರದರ್ಶನ:

ಆಗ ಭಕ್ತವತ್ಸಲೆಯಾದ ಆ ಆದಿಕನ್ಯಕೆಯು, 'ಪ್ರಿಯಕುಮಾರರೇ! ಮಹಾ ತಪಸ್ಸಂಪನ್ನರಿಗೂ, ಯೋಗಿವರರಿಗೂ ಸಮಸ್ತದೇವತೆಗಳಿಗೂ ಕೂಡ ನೋಡಲು ಶಕ್ಯವಾಗದ ನನ್ನ ವಿಶ್ವರೂಪವನ್ನು ಪ್ರಾಕೃತಿಕ ನೇತ್ರಗಳಿಂದ ನೀವು ದರ್ಶಿಸಲಾರಿರಿ ಅನಂತತ್ಯಾಗಧನರಾದ ನಿಮ್ಮಲ್ಲಿಯ ವಾತ್ಸಲ್ಯದಿಂದ ನಿಮಗೆ ದಿವ್ಯದೃಷ್ಟಿಯನ್ನು ಪ್ರಸಾದಿಸುತ್ತಿದ್ದೇನೆ.



ಅಗ್ನಿ ಪ್ರವೇಶಾನಂತರ ವಾಸವಿದೇವಿ ತನ್ನ ನಿಜಸ್ವರೂಪವಾದ ವಿಶ್ವರೂಪವನ್ನು ಪ್ರದರ್ಶಿಸುತ್ತಿರುವುದು.

ನನ್ನ ವಿಶ್ವರೂಪವನ್ನು ವೀಕ್ಷಿಸಿರಿ; ಎಂದು ಪರಮಾದ್ಭುತವಾದ ತನ್ನ ವಿರಾಟ್ಸ್ವರೂಪವನ್ನು ಪ್ರಕಟಗೊಳಿಸಿದಳು.

ಸತ್ಯಲೋಕ ಶಿರಸ್ಸಾಗಿ, ಸೂರ್ಯಚಂದ್ರರೇ ನೇತ್ರಗಳಾಗಿ, ಸಮಸ್ತ ದಿಕ್ಕುಗಳು ಕರ್ಣಗಳಾಗಿ, ಸರ್ವವೇದಗಳು ವಾಕ್ಕುಗಳಾಗಿ, ಸಮಷ್ಟಿ ವಾಯುವು ಪ್ರಾಣವಾಗಿ, ಋಷಿಗಳಿಂದ ಅವ್ಯಕ್ತವೆಂದು ಕೀರ್ತಿಸಲ್ಪಡುವ ಸರ್ವಾತ್ಮಕ ಶುದ್ಧಚೈತನ್ಯವೇ ಹೃದಯವಾಗಿ, ಪೃಥಿವಿಯು ಜಘನವಾಗಿ, ಭುವಲೋಕವು ನಾಭಿಯಾಗಿ, ನಕ್ಷತ್ರಲೋಕವು ವಕ್ಷಸ್ಥಲವಾಗಿ ಮಹ ರ್ಲೋಕವು ಕಂಠವಾಗಿ ಜನೋಲೋಕವು ಮುಖವಾಗಿ, ತಪೋಲೋಕವು ಲಲಾಟವಾಗಿ, ಇಂದ್ರಾದಿ ಲೋಕಪಾಲಕರು ಬಾಹುಗಳಾಗಿ, ಸಮಸ್ತ ಗಂಧವೇ ಘ್ರಾಣೇಂದ್ರಿಯವಾಗಿ, ಅಗ್ನಿಯು ಮೂರನೆಯ ನೇತ್ರವಾಗಿ, ಅಹೋರಾತ್ರಿಗಳು ಕಣ್ರೆಪ್ಪೆಗಳಾಗಿ, ಸಮಸ್ತ ವಾರಿಧಿಗಳು ರಸನೇಂದ್ರಿ ಯಾಧಾರವಾದ ದವಡೆಗಳಾಗಿ, ಸಮಸ್ತಜಲಗತವಾದ ರಸವು ನಾಲಿಗೆಯಾಗಿ, ಕಾಲಸ್ವರೂಪವಾದ ಮೃತ್ಯುವೇ ಕೋರೆದಾಡೆಗಳಾಗಿ, ಸ್ತ್ರೀಪುತ್ರಾದಿಗಳಲ್ಲಿರುವ ಮೋಹವೇ

ಪಲ್ಲುಗಳಾಗಿ, ಮಹಾಮಾಯೆಯೇ ಹಾಸವಾಗಿ, ಸರ್ವಸ್ವಷ್ಟಿಯು ಆಕೆಯ ಕೆಳಗಣ್ಣೋಟವಾಗಿ, ಲಜ್ಜಾಲೋಭಗಳು ಮೇಲಿನ ಕೆಳಗಿನ ಅಧರಗಳಾಗಿ, ಸೃಷ್ಟಿಕರ್ತನಾದ ಸಮಷ್ಟಿ ಪ್ರಜಾಪತಿಯೇ ಸಮುದ್ರಗಳು ಗರ್ಭವಾಗಿ, ಪರ್ವತಸಮುದಾಯವೆಲ್ಲ ಅಸ್ಥಿಗಳಾಗಿ, ನದಿಗಳೆಲ್ಲ ನರಗಳಾಗಿ, ಸಕಲವೃಕ್ಷಜಾತವೆಲ್ಲ ರೋಮಗಳಾಗಿ, ಬಾಲ್ಯಯಾವ್ವನ ಕೌಮಾರ್ಯ ವಾರ್ಧಕ್ಯಗಳು ಗಮನವಾಗಿ, ವ್ಯೋಮವೇ ಕೇಶಗಳಾಗಿ, ಉಭಯ ಸಂಧ್ಯೆಗಳು ವಸ್ತ್ರಗಳಾಗಿ ಶೋಭಿಸುವ ಆ ವಿರಾಟ್ಸ್ವ ರೂಪಿಣಿಯಲ್ಲಿ ಸತ್ವರಜಸ್ತಮೋಗುಣಗಳು ಮತ್ತು ಅವುಗಳ ಸಾಧನಗಳು, ವಿಷ್ಣು ಬ್ರಹ್ಮೇಶ್ವರರು ಮತ್ತು ಮಹಾಲಕ್ಷ್ಮಿ ಮಹಾಸರಸ್ವತಿ ಮಹಾಕಾಳಿಗಳಾಗಿ, ಅತಲದಿಂದ ಮೊದಲಾಗಿ ಪಾತಾಳಲೋಕದ ವರೆಗೂ ಇರುವ ಲೊಕಗಳು ಸೊಂಟದಿಂದ ಹಿಡಿದು ಪಾದಗಳವರೆಗಿನ ಅವಯವಗಳಾಗಿ ಪ್ರಕಾಶಿಸುತ್ತಿದ್ದ ಊಹಾತೀತವಾದ ಪರಾಶಕ್ತಿಯ ವಿಶ್ವರೂಪವನ್ನು ಭಕ್ತವರೇಣ್ಯರೆಲ್ಲರು ತಮಗೆ ಲಭಿಸಿದ ದಿವ್ಯದೃಷ್ಟಿಯಿಂದ ದರ್ಶಿಸಬಲ್ಲವರಾದರಯ ಆ ವಿರಾಟ್ರೂಪವು ಅನಂತ ಜ್ವಾಯಿಯೋಳಗೆ ಸಮಸ್ತ ಜೀವರಾಶಿಗಳು ಶ್ರೀಘ್ರಗತಿಯಿಂದ ಪ್ರವೇಶಿಸುತ್ತಿದ್ದವು. ಆ ವಿಶ್ವರೂಪಿಣಿಯು ಅನೇಕ ವಿಧ ಆಯುಧಗಳನ್ನು ಧರಿಸಿದ್ದಳು. ಅನಂತಕೋಟಿ ಸೂರ್ಯ ಪ್ರಕಾಶಯುಕ್ತಳಾಗಿ ಅನಂತ ಶೀರ್ಷ, ವಕ್ತ್ರ, ನೇತ್ರ, ಬಾಹೂರುಪಾದಗಳಿಂದ ವಿರಾಜಿಸುತ್ತಿದ್ದಳು. ಕೋಟ್ಯಾನುಕೋಟಿ ಮಿಂಚುಗಳ ಕಾಂತಿಸಹಿತಳಾಗಿ ದರ್ಶಿಸಲು ಕಷ್ಟವಾಗುವಂತೆ, ಅತ್ಯಂತಭಯಾನಕವಾಗಿ ಬಹುವರ್ಣಗಳನ್ನು ವರ್ಣಗಳನ್ನು ಪ್ರಸರಿಸುತ್ತ ಪ್ರಕಾಶಿಸುತ್ತಿದ್ದಳು.

ಆ ದೇವಿಯು ತನ್ನಲ್ಲಿ ಭೂತ ಭವಿಷ್ಯತ್ ವರ್ತಮಾನಗಳನ್ನು ತೋರಿಸಿದಳು. ಕಾಲಾಗ್ನಿಸ್ವರೂಪಳಾಗಿ ಉಜ್ವಲ ಕಾಂತಿಯುಕ್ತವಾದ ಆಕೆಯ ವಿರಾಟ್ ದಂಷ್ಟ್ರಾಕರಾಳವನ್ನು ನೋಡಲಾರದೆ ಅಲ್ಲಿದ್ದ ಜನರೆಲ್ಲರು ಭಯದಿಂದ ಕಂಪಿತರಾಗಿ ಹಾಹಾಕಾರ ಮಾಡುತ್ತಾ, ಕಡೆಗೆ ಧೈರ್ಯವಹಿಸಿ ಗದ್ಗದ ನುಡಿಗಳಿಂದ ಈ ವಿಧವಾಗಿ ಸುತ್ತಿಸಿದರು.

'ಹೇ ಮಾತೆ! ನಮ್ಮ ಅಪರಾಧಗಳನ್ನು ಕ್ಷಮಿಸು. ಅನಂತವೂ ಅತ್ಯಂತ ಘೋರವೂ, ಭಯಂಕರವೂ ಆದ ನಿನ್ನ ವಿಶ್ವರೂಪವನ್ನು ನೋಡುವುದರಿಂದ ಭೀತಚಿತ್ತರಾದೆವು. ಪಾಮರರಾದ ನಾವು ನಿನ್ನ ಮಹತ್ವವನ್ನು ಸ್ತುತಿಸಲು ಶಕ್ತರಲ್ಲ, ಹೇ ಬ್ರಹ್ಮಪ್ರಣವಶಕ್ತಿಯೇ! ಹೇ ಹ್ರೀಂಕಾರರೂಪಿಣಿಯೆ! ಸಮಸ್ತ ಜಗತ್ತುಗಳಿಗೆಲ್ಲ ನೀನೇ ಆಳುವವಳು. ಸರ್ವೋಪನಿಷತ್ತುಗಳ ಸಿದ್ಧಾಂರಫಲಸ್ವರೂಪಿಣಿಯಾದ ನಿನಗೆ ಮತ್ತೆ ಮತ್ತೆ ನಮಸ್ಕಾರಗಳು. ಅಗ್ನಿ, ಸೂರ್ಯ, ಚಂದ್ರ, ಸಕಲ ಔಷಧಗಳು, ಸಮಸ್ತ ದೇವದಾನವಗಣಗಳು ಮುಂತಾದ ಸರ್ವಸೃಷ್ಟಿಗೆ ಜನ್ಮದಾತೆಯಾಗಿ ಸರ್ವವೂ ನೀನೇ ಆಗಿ ರಾರಾಜಿಸುತ್ತಿರುವ ನಿನ್ನ ವಿಶ್ವರೂಪಕ್ಕೆ ನಮಸ್ಕಾರಗಳು. ಯಾರಿಂದ ಸಮುದ್ರಗಳು, ಪರ್ವತಗಳು, ನದಿಗಳು, ವೃಕ್ಷಗಳು, ರಸಗಳು, ಪಶುಗಳು, ಪಕ್ಷಿಗಳು ಮುಂತಾದುವೆಲ್ಲವೂ ಉತ್ಪನ್ನವಾದವೋ ಆ ನಿನ್ನ ವಿಶ್ವರೂಪಕ್ಕೆ ನಮಸ್ಕಾರಗಳು. ಹೇ ಪರಮೇಶ್ವರಿ! ಲೋಕಾತೀತವಾಗಿ, ಭಯಂಕರವಾಗಿರುವ ನಿನ್ನ ಈ ವಿಶ್ವರೂಪವನ್ನು ಹಿಂದೆಗೆದುಕೊಂಡು ಅತಿಮನೋಹರವಾದ ನಿನ್ನ ಹಿಂದಿನ ರೂಪವನ್ನು ನಮಗೆ ತೋರಿಸು; ಎಂದು ಪ್ರಾರ್ಥಿಸಿದರು.

ಈ ರೀತಿಯಲ್ಲಿ ಭೀತಿಹೊಂದಿದ್ದ ಸಮಸ್ತ ಭಕ್ತಜನರನ್ನು ನೋಡಿ ದಯಾಸಾಗರಿ ಯಾದ ಜಗನ್ಮಾತೆಯು ಘೋರವಾದ ತನ್ನ ವಿಶ್ವರೂಪವನ್ನು ಹಿಂದೆಗೆದುಕೊಂಡು ಸುಂದರವಾದ ತನ್ನ ವಾಸವಿ ಕನ್ಯಕಾರೂಪವನ್ನು ತೋರಿಸಿದಳು. ಅತೀವ ಕೋಮಲವಾದ ಅವಯವಗಳಿಂದ ದಯಾಪೂರ್ಣ ನೇತ್ರಗಳಿಂದ ಕಿರುನಗೆ ಬೀರುತ್ತ ಮುಖಕಮಲದಿಂದ ಶೋಭಿಸುತ್ತಿದ್ದ ಆ ಸುಂದರ ರೂಪವನ್ನು ದರ್ಶಿಸಿ ಭಯರಹಿತರಾಗಿ ಶಾಂತಚಿತ್ತರಾಗಿ ಆ ಭಕ್ತಜನರು ಆನಂದಾತಿಶಯದಿಂದ ಆಕೆಗೆ ನಮಸ್ಕರಿಸಿದರು. ಆಗ ವಾಸವಿ ದೇವಿಯು, 'ಎಲೈ ಭಕ್ತರೇ! ನಿಮ್ಮಲ್ಲಿಯ ವಾತ್ಸಲ್ಯದಿಂದಾಗಿ ಲೋಕಾತೀತವಾದ ನನ್ನ ವಿಶ್ವರೂಪವನ್ನು ನಿಮಗೆ ತೋರಿಸಿದೆನು. ನಾಲ್ಕು ವೇದಗಳನ್ನು ಸಾಂಗೋಪಾಂಗವಾಗಿ ಅಧ್ಯಯನ ಮಾಡುವುದರಿಂದಲೂ, ಅಷ್ಟಾಂಗಯೋಗವನ್ನು ಸಾಧಿಸುವುದರಿಂದಲೂ, ಮಹತ್ತರ ದಾನವ್ರತದಿಂದಲೂ, ಘೋರವಾದ ತಪಸ್ಸಿನಿಂದಲೂ, ಅನೇಕಕ್ರತಗಳನ್ನು

ನಡೆಸುವುದರಿಂದಲೂ ನನ್ನ ಕರುಣೆಯಿಲ್ಲದಿದ್ದರೆ ನನ್ನೀ ವಿಶ್ವರೂಪವನ್ನು ದರ್ಶಿಸಲು ಶಕ್ಯವಲ್ಲ. ಅಂಥ ನನ್ನ ಅದ್ಭುತ ರೂಪವನ್ನು ನೋಡಿ ನೀವೆಲ್ಲರೂ ಧನ್ಯರಾದಿರಿ. ನನ್ನ ದಿವ್ಯದರ್ಶನದಿಂದ ನಿಮ್ಮಪಾಪಗಳೆಲ್ಲ ನಶಿಸಿಹೋದವು'.

'ಹೇ ಭಕ್ತವರೇಣ್ಯರೇ! ನಾನೀಗ ಅಗ್ನಿಪ್ರವೇಶಮಾಡುವೆನು. ನನ್ನ ಜೊತೆಯಲ್ಲಿ 102 ಗೋತ್ರಗಳ ಪುಣ್ಯದಂಪತಿಗಳು ಕೂಡ ಅಗ್ನಿಯಲ್ಲಿ ಪ್ರವೇಶಿಸುವರು. ಆ ಬಳಿಕ ನಾನು ಅರ್ಚಾವತಾರಮೂರ್ತಿಯಾಗಿ ಸಾಕ್ಷಾತ್ಕರಿಸುವೆನು. ಭುವನೇಶ್ವರಿಯಾದ ನನ್ನನ್ನು ಇನ್ನು ಮುಂದೆ ಶ್ರೀವಾಸವಿಕನ್ಯಕಾಪರಮೇಶ್ವರಿ ನಾಮದಿಂದ ಆರಾಧಿಸುತ್ತ ಕೃತಾರ್ಥರಾಗಿರಿ. ಅನುದಿನವೂ ಶ್ರೀನಿಧ್ಯನುಸಾರವಾಗಿ ವೇದೋಕ್ತವಿಧಾನದಲ್ಲಿ ಪಂಚಾಯುತನದೇವತೆಗಳ ಮಧ್ಯೆ ಮೂಲಸಾನವನೇರ್ಪಡಿಸಿ ಅಲ್ಲಿ ವಾಸವಿಕನ್ಯಕಾಯಂತ್ರ ಸಹಿತವಾಗಿ ನನ್ನ ಮೂರ್ತಿಯನ್ನು ಪ್ರತಿಷ್ಠಾಪಿಸಿ ಷೋಡಶೋಪಚಾರಾದಿಗಳಾದ ಸರ್ವಸಪರ್ಯಗಳಿಂದ ಸರ್ವಕಾಲಗಳಲ್ಲಿ ನನ್ನನ್ನು ಅರ್ಚಿಸಿರಿ. ನನ್ನ ಮಂತ್ರವನ್ನು ಜಪಿಸುತ್ತ ಸಮಸ್ತ ಕಾಮಿತ ಫಲಗಳನ್ನು ಹೊಂದಿರಿ. ಲಕ್ಷ್ಮೀ ಪಾರ್ವತೀಸರಸ್ವತಿಯರೆಂಬ ತ್ರಿದೇವತೆಯರ ಲಾಂಛನಗಳಿಂದ ವಿರಾಜಿಸುವ ಸರ್ವಾಂಗ ಸುಂದರವಾದ ನನ್ನ ಅರ್ಚಾವತಾರದ ದಿವ್ಯ ಚತುರ್ಭುಜರೂಪವನ್ನಾಗಲೀ ಅಥವಾ ಭವ್ಯ ದ್ವಿಭುಜರೂಪವನ್ನಾಗಲೀ ರೂಪಿಸಿಕೊಂಡು ಸದಾ ನನ್ನನ್ನು ಪೂಜಿಸುವವರಿಗೆ ಸಮಸ್ತ ಸಂಪದಗಳು ಸಂಪೂರ್ಣವಾಗಿ ಕೈಗೂಡುವುವು. ಗೃಹಗಳಲ್ಲಿ, ವಿವಾಹಾದಿ ಶುಭಕಾರ್ಯಗಳಲ್ಲಿಯಾ ವನಗಳಲ್ಲಿಯೂ ನನ್ನ ವೇಳೆಗಳಲ್ಲೂ ಎಲ್ಲ ವಿಧಗಳಲ್ಲೂ ಕಾಪಾಡುವೆನು. ಇದು ನನ್ನ ಪ್ರತಿಜ್ಞೆ' ಎಂದು ಹೇಳಿ ಆ ವಾಸವಿಕನ್ಯಕಾ ದೇವಿಯು ಮಹಾಗ್ನಿಯಲ್ಲಿ ಪ್ರವೇಶಿಸಿದಳು. ನರತರವೇ ಆ ಅಗ್ನಿಕುಂಡದಿಂದ ಲೀಲಾಶುಕಾರೋಹಿತ ದಿವ್ಯಪದ್ಮವನ್ನು ವೇದಪುಸ್ತಕವನ್ನು ಅಕ್ಷಮಾಲೆಯಿಂದೊಡಗೂಡಿದ ಅಭಯಮುದ್ರೆ, ವರದಮುದ್ರೆಯನ್ನು ಹೊಂದಿದ ನಾಲ್ಕು ಭುಜಗಳನ್ನು ಧರಿಸಿದವಳಾಗಿ ಹ್ರೀಂಕಾರ ವಹ್ನಿಮಧ್ಯದಲ್ಲಿ ವಿರಾಜಿಸುತ್ತಿದ್ದ ವಿಶಾಲ ದಿವ್ಯಪದ್ಮದ ಮೇಲೆ ನಿಂತಿರುವ ಶ್ರೀವಾಸವಿ ದೇವಿ ಅರ್ಚಾವತಾರಮೂರ್ತಿಯಾಗಿ ಅಗ್ನಿಕುಂಡದಿಂದ ಆವಿರ್ಭವಿಸಿದಳು. ಆ ದಿವ್ಯಮೂರ್ತಿಯನ್ನು ನೋಡಿ ಎಲ್ಲರೂ ಆಶ್ಚರ್ಯಚಕಿತರಾದರು. ಆ

ಮೂರ್ತಿಯನ್ನು ಮನಸ್ಸಿನಲ್ಲಿ ನಿಲ್ಲಿಸಿಕೊಂಡು ಅಮಿತೋತ್ಸಾಹಪರರಾಗಿ ಜಯಜಯಧ್ವನಿ ಮಾಡಿದರು. ಆ ಕೂಡಲೆಯೇ 102 ಗೋತ್ರಜರ ಪುಣ್ಯದಂಪತಿಗಳು ಅಗ್ನಿಕುಂಡಗಳನ್ನು ಪ್ರವೇಶಿಸಿದರು.

ಅಷ್ಟರಲ್ಲಿ ವಿಸ್ಮಯಕರ ವಿಧಾನದಲ್ಲಿ ಆಕಾಶದಿಂದ **ದಿವ್ಯವಿಮಾನಗಳು** ಅಲ್ಲಿಗೆ ಬಂದವು. ಅಗ್ನಿಪ್ರವೇಶ ಮಾಡಿದ ಪುಣ್ಯದಂಪತಿಗಳು ಅವರವರ ಅಗ್ನಿಕುಂಡಗಳಿಂದ ಕಾಂತಿಸ್ವರೂಪರಾಗಿ ಹೊರಬಂದು ಆ ವಿಮಾನಗಳನ್ನು ಹತ್ತಿದರು. ಸತೀಸಮೇತರಾದ ಬ್ರಹ್ಮ ವಿಷ್ಣುಮಹೇಶ್ವರಾದಿಗಳು, ಸಮಸ್ತ ದೇವಗಣಗಳು ನಿಂತು ಆದಿಪರಾಶಕ್ತಿಯಾದ ವಾಸವಿ ಕನ್ಯಕೆಯನ್ನು ಸ್ತುತಿಸುತ್ತ ಕುಸುಮವರ್ಷಗರೆಯುತ್ತಿರಲು ಭುವನೇಶ್ವರಿಯಾದ **ವಾಸವಿಕನ್ಯಕೆಯು ಹೋಮಕುಂಡದಿಂದ ಮೇಲೆದ್ದು ಅದ್ಭುತವಿಮಾನಾರೂಢಳಾಗಿ ವೈಶ್ಯ ದಂಪತಿಗಳೊಡನೆ ತನ್ನ ಆವಾಸ ಸ್ಥಾನವಾದ ಶ್ರೀ ಚಕ್ರನಗರವೆಂಬ ಸರ್ವೋನ್ನತಲೋಕಕ್ಕೆ ಪ್ರಯಾಣ ಮಾಡಿದಳು.**